# ಸುದೀಪ್ ಈಗ ವಿಕ್ರಾಂತ್ ರೋಣ

ಅನೂಪ್ ಭಂಡಾರಿ ಸುದೀಪ್ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ ಎನ್ನುವುದು ಹಳೆಯ ಸುದ್ದಿ. ಅವರು 'ಬಿಲ್ಲ ರಂಗ ಬಾಷ' ಎಂಬ ಚಿತ್ರವನ್ನು ನಿರ್ದೇಶಿಸಲಿದ್ದಾರೆ, ಅದರಲ್ಲಿ ಸುದೀಪ್ ನಾಯಕನಾಗಿ ನಟಿಸಲಿದ್ದಾರೆ ಎಂಬ ಸುದ್ದಿಯನ್ನು ತಂಡವೇ ನೀಡಿತ್ತು. ನಂತರ ಅದು ಹಿನ್ನೆಲೆಗೆ ಸರಿದು 'ಫ್ಯಾಂಟಮ್' ಎಂಬ ಚಿತ್ರದಲ್ಲಿ ಸುದೀಪ್ ನಾಯಕನಾಗಿ ನಟಿಸುತ್ತಿದ್ದಾರೆ ಎಂಬ ಸುದ್ದಿ ಹೊರಬಿದ್ದಿತ್ತು. ಆದರೆ ನಂತರ ಆ ಚಿತ್ರದ ಬಗ್ಗೆ ಯಾವುದೇ ಅಪ್‌ಡೇಟ್ಸ್ ಸಿಕ್ಕಿರಲಿಲ್ಲ.



ಆದರೆ ಇದೀಗ ಚಿತ್ರತಂಡವೇ 'ಫ್ಯಾಂಟಮ್' ಚಿತ್ರೀಕರಣ ಆರಂಭವಾಗುತ್ತಿರುವುದರ ಸೂಚನೆ ನೀಡಿದೆ. ಇದರ ಮೊದಲ ಹಂತವಾಗಿ ಸುದೀಪ್ ಫೋಟೊಶೂಟ್ ಕೂಡ ನಡೆಸಿದೆ.

ಸ್ವತಃ ಸುದೀಪ್ ಅವರೇ ಟ್ವಿಟರ್ ಖಾತೆಯಲ್ಲಿ ಈ ಕುರಿತು ಬರೆದುಕೊಂಡಿದ್ದಾರೆ. ಚಿತ್ರದಲ್ಲಿ ತಮ್ಮ ಪಾತ್ರದ ಹೆಸರನ್ನೂ ಅವರು ರಿವೀಲ್ ಮಾಡಿದ್ದಾರೆ. 'ಫ್ಯಾಂಟಮ್' ಚಿತ್ರದಲ್ಲಿ ಅವರು ವಿಕ್ರಾಂತ್ ರೋಣ ಪಾತ್ರದಲ್ಲಿ ನಟಿಸುತ್ತಿದ್ದಾರಂತೆ. "ಫ್ಯಾಂಟಮ್ ಸಿನಿಮಾದಲ್ಲಿ ನಾನು ವಿಕ್ರಾಂತ್ ರೋಣ ಎಂಬ ಪಾತ್ರವನ್ನು ಮಾಡುತ್ತಿದ್ದೇನೆ. ಇದೊಂದು ಹೊಸ ಅನುಭವ. ಅನೂಪ್ ಭಂಡಾರಿ ಪೂರ್ತಿಯಾಗಿ ಹೊಸತನದಲ್ಲಿ ಈ ಪಾತ್ರವನ್ನು ಕಟ್ಟಿದ್ದಾರೆ. ಎಲ್ಲರನ್ನೂ ರಂಜಿಸುವ ಪ್ರಯತ್ನ ನಮ್ಮದು' ಎಂದು ಅವರು ಟ್ವಿಟರ್‌ನಲ್ಲಿ ಬರೆದುಕೊಂಡಿದ್ದಾರೆ. ಇದರ ಜೊತೆಗೆ ಮುಖದ ಅರ್ಧಭಾಗ ಮಾತ್ರ ಕಾಣುವ ಚಿತ್ರವನ್ನೂ ಅವರು ಪೋಸ್ಟ್ ಮಾಡಿದ್ದಾರೆ.

ಚಿತ್ರಕ್ಕೆ, ಕಥೆ, ಚಿತ್ರಕಥೆ, ಸಂಭಾಷಣೆಯ ಜೊತೆಗೆ ಕೆಲವು ಹಾಡುಗಳಿಗೆ ಸಾಹಿತ್ಯವನ್ನೂ ಅನೂಪ್ ಅವರೇ ರಚಿಸಿದ್ದಾರೆ. ವಾಸ್ತವ ಮತ್ತು ಫ್ಯಾಂಟಸಿ ಬೆರೆಸಿದ ಈ ಚಿತ್ರ ಸಾಕಷ್ಟು ಅದ್ದೂರಿತನದಿಂದ ಕೂಡಿರಲಿದೆಯಂತೆ. ಬಹುತೇಕ ಸೆಟ್‌ನಲ್ಲಿಯೇ ಚಿತ್ರೀಕರಣ ನಡೆಸುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ. ಸುದೀಪ್ ಹಿಂದಿನ ಕೆಲವು ಸಿನಿಮಾಗಳ ಹಾಗೆ ಈ ಚಿತ್ರವೂ ಪ್ಯಾನ್ ಇಂಡಿಯಾ ರಿಲೀಸ್ ಮಾಡುವ ಕನಸನ್ನೂ ನಿರ್ದೇಶಕರು ಕಾಣುತ್ತಿದ್ದಾರೆ. ■



# ಬನಾರಸ್‌ನ ಬಗೆಬಗೆ ಪಾತ್ರಗಳು

'ಬೆಲ್‌ಬಾಟಂ' ಹಿಟ್‌ನ ನಂತರ ಜಯತೀರ್ಥ 'ಬನಾರಸ್'ನ ಬೆನ್ನುಹತ್ತಿರುವುದು ಗೊತ್ತೇ ಇದೆ. ಒಂದು ವಿಶಿಷ್ಟ ಪ್ರೇಮಕಥೆಯನ್ನು ಅವರು ಬನಾರಸ್‌ನಲ್ಲಿ ಚಿತ್ರೀಕರಣ ಮಾಡಿದ್ದಾರೆ. ಚಿತ್ರದ ಚಿತ್ರೀಕರಣ ಬಹುತೇಕ ಭಾಗ ಮುಗಿದಿದ್ದು ಪೋಸ್ಟ್ ಪ್ರೊಡಕ್ಷನ್ ಕೆಲಸ ನಡೆಯುತ್ತಿದೆ. ಇದು ಒಂದು ಪ್ರೇಮಕಥೆ ಎನ್ನುವುದೇನೋ ಹೌದು, ಆದರೆ ಪ್ರೇಮಕಥೆಯ ಮಹಾನದಿಗೆ ಹಲವು ವಿಶಿಷ್ಟ ಪಾತ್ರಗಳ ಕಿರುತೊರೆಯನ್ನು ಸೇರಿಸುವುದು ಜಯತೀರ್ಥ ಅವರ ಶೈಲಿ. ಅವರ 'ಒಲವೇ ಮಂದಾರ' ಚಿತ್ರ ಅದಕ್ಕೆ ಉತ್ತಮ ಉದಾಹರಣೆ.

ಅವರ ಹೊಸ ಚಿತ್ರ 'ಬನಾರಸ್'ನಲ್ಲಿಯೂ ಅವರು ತಮ್ಮ ಚಿತ್ರೀಕರಣ ತಾಣದಲ್ಲಿ ಕಂಡ ಹಲವು ವಿಶಿಷ್ಟ ಪಾತ್ರಗಳನ್ನು ಸೇರಿಸಿಕೊಂಡಿದ್ದಾರಂತೆ. ಮುಖ್ಯವಾಗಿ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರ ಮೊಮ್ಮಗ ಉಸ್ತಾದ್ ಫತೇ ಅಲಿ ಖಾನ್ ಅವರು ಬನಾರಸ್‌ನಲ್ಲಿ ಕಾಣಿಸಿಕೊಂಡಿದ್ದಾರೆ.



ಬನಾರಸ್‌ನಲ್ಲಿ ಚಿತ್ರೀಕರಣದಲ್ಲಿ ತೊಡಗಿಕೊಂಡಿದ್ದಾಗಲೇ ಅವರು ಭೇಟಿಯಾಗಿದ್ದು ಚಿತ್ರದಲ್ಲಿ ಶಹನಾಯಿ ವಾದ್ಯವನ್ನು ನುಡಿಸಿದ್ದಾರೆ. 'ಬಹುಶಃ 'ಸನಾದಿ ಅಪ್ಪಣ್ಣ' ಸಿನಿಮಾದ ನಂತರ ಅದೇ ಶಹನಾಯಿ ಪುನರ್‌ಬಳಕೆ ಆಗಿದ್ದು ನಮ್ಮ ಚಿತ್ರದಲ್ಲೇ ಎಂದು ಕಾಣುತ್ತದೆ. ಇದು ನನಗೆ ಹೆಮ್ಮೆಯ ವಿಷಯ' ಎನ್ನುತ್ತಾರೆ ಜಯತೀರ್ಥ.

ಇಷ್ಟೇ ಅಲ್ಲ, ಅಮೆರಿಕದಿಂದ ಬಂದು, ಇಲ್ಲಿನ ಸಂಸ್ಕೃತಿಗೆ ಮಾರುಹೋಗಿ, ಸನ್ಯಾಸ ಸ್ವೀಕರಿಸಿ, ಇಲ್ಲಿನ ಜನರಿಗೇ ಅಧ್ಯಾತ್ಮಬೋಧೆ ಮಾಡುತ್ತಿರುವ ರುದ್ರಾಕ್ಷಿ ಬಾಬಾ ಮತ್ತು ಮಾಯಾ ಭಾರತಿ ಎಂಬುವವರನ್ನು ಜಯತೀರ್ಥ ತಮ್ಮ ಸಿನಿಮಾದ ಭಾಗ ಮಾಡಿಕೊಂಡಿದ್ದಾರೆ.

ಚಿತ್ರೀಕರಣದ ಜಾಗಗಳ ಶೋಧದಲ್ಲಿದ್ದಾಗ ಪರಿಚಯವಾದ ಇನ್ನೊಬ್ಬ ವ್ಯಕ್ತಿ ಜ್ಯೋತಿಲಾಲ್. ಅವರು 20 ಬೋಟ್‌ಗಳ ಒಡೆಯ. ಅವರ ತಂದೆ, ತಾತ ಎಲ್ಲರೂ ಅಲ್ಲಿ ನಾವಿಕರಾಗಿಯೇ ಇದ್ದರು. ಆತ ಮೂವತ್ತು ವರ್ಷಗಳಿಂದ ಇದೇ ವೃತ್ತಿಯಲ್ಲಿ ಇದ್ದಾರೆ. ಸುಂದರವಾಗಿ ಹಾಡನ್ನೂ ಹೇಳುವ ಅವರನ್ನು ಚಿತ್ರದ ಭಾಗವಾಗಿಸಿಕೊಂಡಿದ್ದಲ್ಲದೇ, ಅವರಿಂದ ಒಂದು ಹಾಡನ್ನೂ ಹೇಳಿಸಿದ್ದಾರೆ.

ಚಿತ್ರದ ಚಿತ್ರಕಥೆ ರಚನೆಯ ಸಮಯದಲ್ಲಿಯೇ ಬನಾರಸ್‌ಗೆ ಭೇಟಿ ನೀಡಿ ಅಲ್ಲಿನ ಜನಜೀವನವನ್ನು ಅಭ್ಯಸಿಸಿದ್ದರಿಂದ ಅವರಿಗೆ ಕಥೆಯ ಸುಲಭ ಹರಿವಿನ ಜೊತೆಗೇ ಈ ಪಾತ್ರಗಳನ್ನು ಒಳಗೊಳ್ಳುವುದು ಸಾಧ್ಯವಾಗಿದೆ.

ಝೈದ್ ಖಾನ್ ಮತ್ತು ಸೋನಲ್ ಮೊಂತೆರೊ ಈ ಚಿತ್ರದಲ್ಲಿ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ಸದ್ಯಕ್ಕೆ ಎರಡು ಹಾಡುಗಳ ಚಿತ್ರೀಕರಣ ಬಾಕಿ ಇದ್ದು, ಅದನ್ನು ಪೂರೈಸಲು ಶ್ರೀಲಂಕಾಕ್ಕೆ ಹೋಗುವ ಸಿದ್ಧತೆಯಲ್ಲಿ ಚಿತ್ರತಂಡ ಇದೆ. ■